
“ಟೇಬಲ್ಲಿನ ಸುತ್ತ ಕೂತಾಗ ತಾನು (ಬೇಂದ್ರೆ) ಹಿಂದೊಮ್ಮೆ ಬರೆಯಲು ಹೊರಟ ಕಾದಂಬರಿಯ ಮೊದಲ ಅಧ್ಯಾಯದ ಕಥೆ ಹೇಳಿದರು. ಇದು ನನಗೆ ಮಹತ್ವದ್ದೆನ್ನಿಸುವುದರಿಂದ ವಿವರಿಸುವೆ.

ಬೇಂದ್ರೆ ಬರೆಯಲು ಶುರುಮಾಡಿದ್ದ ಕಾದಂಬರಿಯ ಮೊದಲ ಅಧ್ಯಾಯದಲ್ಲಿ ಒಂದು ಗಂಡು ಒಂದು ಹೆಣ್ಣು ಪರಸ್ಪರ ಪ್ರೇಮಿಸುತ್ತಾರೆ. ಮೈ ಬೆಸೆಯದ, ಪ್ಲಟಾನಿಕ್ ಪ್ರಣಯ ಅದು. ಅಧ್ಯಾಯದ ಕೊನೆಯಲ್ಲಿ ಅವರಿಗೊಬ್ಬ ಪುತ್ರ ಜನಿಸುತ್ತಾನೆ, ಅಂದರೆ ಮಾನಸ ಪುತ್ರ.

ಈ ಅಧ್ಯಾಯವನ್ನು ಬೇಂದ್ರೆ ‘ಅಣ್ಣ ಮಾಸ್ತಿ’ಗೆ ಓದಲು ಕೊಡುತ್ತಾರೆ. ಮಾಸ್ತಿ ಹೇಳುತ್ತಾರೆ: ಸರಿ, ಮಾನಸಪುತ್ರ ಬೇಕಾದರೆ ಹುಟ್ಟಲಿ, ಆದರೆ ಇದು ಕಾದಂಬರಿಯಾದ್ದರಿಂದ ಗಂಡು ಹೆಣ್ಣುಗಳಿಗೆ ತಿಳಿಯದಂತೆಯಾದರೂ ಅವರ ಮೈಗಳು ಕೂಡಿದವು ಎಂದು ಸೂಚಿಸಬೇಕಾಗುತ್ತದೆ.

ಇದೇ ಮಾತುಗಳಲ್ಲಿ ಮಾಸ್ತಿಯವರು ಹೇಳಿದರೆಂದು ಅಲ್ಲ – ನಾನು ನೆನಪಿಂದ ಬೇಂದ್ರೆ ಹೇಳಿದ್ದನ್ನು ವರದಿ ಮಾಡುತ್ತಿದ್ದೇನೆ. ಅಂತೂ ಆ ಕತೆ ಕನ್ನಡದ ಈ ಎರಡು ದೊಡ್ಡ ಲೇಖಕರ ಬಗ್ಗೆಯಲ್ಲದೇ, ಭಾವಗೀತೆ ಮತ್ತು ಕಾದಂಬರಿಗಳ ಹಿಂದೆ ಕೆಲಸ ಮಾಡುವ ಸೃಜನಶೀಲ ಪ್ರಜ್ಞೆಯ ಭಿನ್ನ ಮಾರ್ಗಗಳ ಬಗ್ಗೆಯೂ ನನಗೆ ತುಂಬ ಅರ್ಥಪೂರ್ಣವೆನ್ನಿಸಿತ್ತು.

ಈಗ ಹೀಗೂ ಅನ್ನಿಸತ್ತೆ: ಬೇಂದ್ರೆ ಕಾದಂಬರಿ ಬರೆದಿದ್ದರೆ, ಅದೂ ಕೂಡ ವಿಲಕ್ಷಣವಾಗಿರುತ್ತಿತ್ತು. ಅವರ ನಾಟಕ ಕನ್ನಡದ ಮೊದಲನೇ ಅಬ್ಸರ್ಡ್ ನಾಟಕವಾಗಿಲವೇ? ಪಕ.ತಿಯ ಹದ ಮತು


ಮಾಲೆಯ ಮುಂದಿನ ಕುಸುಮ

ಮನೋಹರ ಗ್ರಂಥಮಾಲೆಯ ೨೨ನೆಯ ಕುಸುಮ

“ಮಾನಸ ಪುತ್ರ”

ಪ್ರೋ. ದ. ರಾ. ಬೇಂದ್ರೆ,

ಋತುಗಳನ್ನು ಮೀರದ ವಾಸ್ತವತೆ ಕಾದಂಬರಿಯ ಜೀವಾಳವೆನ್ನಬಹುದಾದರೂ ಕಾದಂಬರಿ ಕೇವಲ ವರದಿಯಾಗದೆ ಕಲಾಕೃತಿಯೆನ್ನಿಸುವುದು ರೂಢಿಜಡರಾಗಿ ನಾವು ಏನನ್ನು ವಾಸ್ತವವೆಂದು ತಿಳಿಯುತ್ತೇವೋ ಅದರಾಚಿಗಿನದನ್ನು, ಅನೂಹ್ಯವನ್ನು ಅದು ಮೂಡಿಸಿದಾಗ. ಬೇಂದ್ರೆ ಬರೆಯಬಹುದಾದ ಕಾದಂಬರಿ ಗಾರ್ಶಿಯಲ್ ಮಾರ್ಕ್ವೆಸ್‌ನ One Hundred Years of Solitudeನಂತೆ ಇದ್ದಿದ್ದರೆ ಆಶ್ಚರ್ಯ ಪಡಬೇಕಿಲ್ಲ.

ಅಕ್ಷಯ ಬತ್ತಳಿಕೆಯಂಥ ಕಲ್ಪಕತೆ, ಎಲ್ಲೆಲ್ಲಿಂದಲೋ ಓದಿ ಪಡೆದ ವಿಲಕ್ಷಣ ವಿಚಾರಗಳು, ಪ್ರಜ್ಞಾಪ್ರವಾಹದ ಮುಕ್ತ ಚಲನ ಶಕ್ತಿ, ಯಾವುದಕ್ಕೆ ಯಾವುದನ್ನಾದರೂ ಕೂಡಿಸಬಲ್ಲ ಚಾತುರ್ಯ, ಮಾತಿನ ರಭಸದಲ್ಲಿ ಮೌನದ ಮಡುವಿಗೆ ಸೆಳೆಯಬಲ್ಲ ಒಳಸುಳಿಗಳು – ಇವು ಲ್ಯಾಟಿನ್ ಅಮೆರಿಕಾದ ಬೋರ್ಹೆಸ್‌ನಲ್ಲಿ, ಐರ್‌ಲ್ಯಾಂಡಿನ ಜಾಯ್ಸ್‌ನಲ್ಲಿ ನಾವು ಕಾಣುವ ಗುಣಗಳು. ಆಶ್ಚರ್ಯವೆಂದರೆ ‘ಹಿಂದುಳಿದ’ ದೇಶಗಳ ಈ ಇಬ್ಬರು ಲೇಖಕರಲ್ಲಿದ್ದ ಶಕ್ತಿ ಬೇಂದ್ರೆಯಲ್ಲಿ ಇತ್ತು. ಆದರೆ ಬೇಂದ್ರೆಗಿದ್ದಂತಹ ಕಲ್ಪಕ ಶಕ್ತಿ ನವೋದಯ ಕಾಲದಲ್ಲಿ ನಮ್ಮ ಅತ್ಯುತ್ತಮ ಕಾದಂಬರಿಗಳಲ್ಲಿ ವ್ಯಕ್ತವಾಗಲಿಲ್ಲ. ನೈತಿಕ ಪ್ರಜ್ಞೆ, ದಟ್ಟವಾದ ವಾಸ್ತವತೆ, ಸಾಮಾಜಿಕ ಅರಿವು – ಇವೆಲ್ಲವೂ ಕಾದಂಬರಿಯ ಅತ್ಯಗತ್ಯ ದ್ರವ್ಯಗಳು. ಕನ್ನಡದಲ್ಲಿ ಅವು ಹೇರಳವಾಗಿವೆ. ಆದರೆ ಕಾದಂಬರಿ ಕೂಡ ನಮ್ಮಲ್ಲಿ ಹೊಸ ರಸಪ್ರಜ್ಞೆಯನ್ನುಂಟು ಮಾಡಲು ಬೇಂದ್ರೆಗಿದ್ದಂಥ ರೂಪಕ ಶಕ್ತಿಯ ಪ್ರತಿಭೆ ಅದರಲ್ಲಿ ಕೆಲಸ ಮಾಡಬೇಕು.”

ಇದನ್ನು ಓದಿದಾಗ ಪ್ರಕಟವಾಗದ ‘ಮಾನಸ ಪುತ್ರ’ ಮಾತಿನ ಕತೆಯಾಗಿ ಮಾತ್ರ ಉಳಿದಿದೆ ಎಂದುಕೊಂಡಿದ್ದೆ. ಮನೋಹರ ಗ್ರಂಥಮಾಲೆಯ 22ನೇ ಕುಸುಮವಾಗಿ ಈ ಕಾದಂಬರಿ ಪ್ರಕಟವಾಗಬೇಕಿತ್ತು. 21ನೇ ಪುಸ್ತಕವಾದ ದೇವುಡು ಅವರ ‘ಸೋಲೋ ಗೆಲುವೋ’ (1936) ಸಣ್ಣಕತೆಗಳ ಸಂಕಲನದಲ್ಲಿ ಬರಲಿರುವ ಪುಸ್ತಕ ಎಂದು ದಾಖಲಿಸಲಾಗಿತ್ತು. ನಂತರದ ‘ವರಗಿರಿ’ ಅವರ ಕಾದಂಬರಿ ‘ಗಂಗಾಸಾನಿ’ (1949)ಯಲ್ಲಿ ‘ಬರಲಿರುವ ಕುಸುಮಗಳು’ ಪಟ್ಟಿಯಲ್ಲಿ ಸಾಮಾಜಿಕ ಕಾದಂಬರಿ ‘ಮಾನಸಪುತ್ರ’ ಕೂಡ ಸೇರಿರುವುದು ಕೇವಲ ಕತೆಯಲ್ಲ ಎಂಬುದನ್ನು ಸಾಬೀತು ಪಡಿಸಿತು.